**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.526/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಬಾನ್ ಸಾಹೇಬ್ | ಸಿ.ಡಬ್ಲ್ಯೂ-10 |
| ತಂದೆಯ ಹೆಸರು / ಗಂಡನ ಹೆಸರು | : | ಲೇ.ಸಬ್ಜಾನ್ ಸಾಬ್ | ಪಿ.ಡಬ್ಲ್ಯೂ-6 |
| ವಯಸ್ಸು | : | 59 ವರ್ಷ | - |
| ಉದ್ಯೋಗ | : | ಎ.ಎಸ್.ಐ, ಹೆಚ್.ಡಿ.ಕೋಟೆ ಪೊಲೀಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **18.04.2024.** |
| ವಾಸಸ್ಥಳ | : | ಹೆಚ್.ಡಿ.ಕೋಟೆ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಸರಗೂರು ಪೊಲೀಸ್ ಠಾಣೆಯಲ್ಲಿ 2014 ರಿಂದ 2022 ರವೆರೆಗೆ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.01.2019 ರಂದು ಚಾಸಾ-1 ರವರು ಆರೋಪಿ ಮತ್ತು ಮಾಲು ಸಮೇತ ಹಾಜರುಪಿಡಿಸಿದ್ದು ಅವುಗಳನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಃ ಸಿ.ಆರ್.5/2019 ರಂತೆ ಪ್ರಕರಣ ದಾಖಲು ಮಾಡಿರುತ್ತೇನೆ. ಜ್ಞಾಪನ / ಪಿರ್ಯಾದನ್ನು ನಿಪಿ**-11** ಎಂದು ಸಾಕ್ಷಿಯ ಸಹಿಯನ್ನು ನಿಪಿ**-11(ಎ)** ಎಂದು ಗುರುತಿಸಲಾಯಿತು. ಪ್ರಥವ ವರ್ತಮಾನ ವರದಿಯನ್ನು ನಿಪಿ**-12** ಎಂದು ಸಾಕ್ಷಿಯ ಸಹಿಯನ್ನು ನಿಪಿ**-12(ಎ)** ಎಂದು ಗುರುತಿಸಲಾಯಿತು.

ದಿಃ 21.01.2019 ರಂದು ಸಂಜೆ 4.45 ರಿಂದ 5.45 ರ ವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಸರಗೂರು ಪೊಲೀಸ್ ಠಾಣೆಯಲ್ಲಿ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿರುತ್ತೇವೆ 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 76 ಪೌಚುಗಳು, ಅದರ ಪೈಕಿ ರಾಸಾಯಿನಿಕ ಪರೀಕ್ಷೆಗೆ ಕಳುಹಿಸಲು 30 ಪೌಚುಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇವೆ. ಆರೋಪಿಯ ಬಾಬ್ತು ಕೆಎ-45 ವೈ 8734 ನೊಂದಣಿಯುಳ್ಳ ಹೀರೋಸ್ಪ್ಲೆಂಡರ್ ಪ್ಲಸ್ ಬೈಕನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಉಳಿದ 46 ಪೌಚುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಿರುತ್ತೇವೆ. ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ**-8(ಸಿ)** ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಃ 6/2019 ರಂತೆ ನೊಂದಣಿ ಮಾಡಿರುತ್ತೇವೆ. ಮಾಲುಪಟ್ಟಿಯನ್ನು ನಿಪಿ**-13** ಎಂದು ಸಾಕ್ಷಿಯ ಸಹಿಯನ್ನು ನಿಪಿ**-13(ಎ)** ಎಂದು ಗುರುತಿಸಲಾಯಿತು.

ದಿಃ 22.01.2019 ರಂದು ಘಟನಾ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುತ್ತೇವೆ. ಸ್ಥಳ ಮಹಜರನ್ನು ಈಗಾಗಲೆ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-1(ಸಿ)** ಎಂದು ಗುರುತಿಸಲಾಯಿತು. ಚಾಸಾ-2 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 09.04.2019 ರಂದು ರಾಸಾಯನಿಕ ಪರೀಕ್ಷೆಯ ವರದಿಯನ್ನು ಆರ್.ಎಫ್.ಎಸ್.ಎಲ್ ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರ್.ಎಫ್.ಎಸ್.ಎಲ್ ವರದಿಯನ್ನು ನಿಪಿ**-14**

ಎಂದು ಸಾಕ್ಷಿಯ ಸಹಿಯನ್ನು ನಿಪಿ**-14(ಎ)** ಎಂದು ಗುರುತಿಸಲಾಯಿತು. ಆರ್.ಎಫ್.ಎಸ್.ಎಲ್ ಮೈಸೂರು ಇವರಿಗೆ ವರದಿಗಾಗಿ ಸಾರಾಯಿ ಪೌಚುಗಳನ್ನು ತಲುಪಿಸಲು ನಮ್ಮ ಠಾಣಾ ಸಿಬ್ಬಂದಿ ಹೆಚ್ ಸಿ 155 ರಾಚಪ್ಪರವರನ್ನು ನೇಮಕ ಮಾಡಿದ್ದು ಅವರಿಗೆ ರಹದಾರಿ ನೀಡಿರುತ್ತೇನೆ. ಸದರಿ ದಾಖಲೆಯನ್ನು ನಿಪಿ**-15** ಎಂದು ಸಾಕ್ಷಿಯ ಸಹಿಯನ್ನು ನಿಪಿ**-15(ಎ)** ಎಂದು ಗುರುತಿಸಲಾಯಿತು. 30 ಸಾರಾಯಿ ಪೌಚುಗಳನ್ನು ಈಗಾಗಲೇ ಮು.ಮಾ.1 ರಿಂದ 30 ಎಂದು ಗುರುತಿಸಲಾಗಿದ್ದು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಫೋಟೋದಲ್ಲಿರುವ ಮೋಟಾರು ಸೈಕಲ್ ಅನ್ನು ಸಾಕ್ಷಿಯು ಗುರುತಿಸುತ್ತಾರೆ. ಆರೋಪಿತನ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಆರೋಪಿತನ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಅವರ ಪರ ವಕೀಲರು ಇಪಿ ಸಲ್ಲಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ</u>**

ಚಾಸಾ-1 ರವರು ಮುದ್ದೆ ಮಾಲು ಸಮೇತ ಆರೋಪಿತನನ್ನು ಹಾಜರುಪಡಿಸಿದ್ದರಿಂದ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಿದ ಸ್ಥಳದಲ್ಲಿ ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರನ್ನು ಮಾಡದೇ ಇರುವುದರಿಂದ ನನ್ನ ಮುಂದೆ ಆ ದಿನ ಆರೋಪಿಯನ್ನಾಗಲಿ ಮುದ್ದೆ ಮಾಲನ್ನಾಗಲಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ಜ್ಞಾಪನದ ಆಧಾರದ ಮೇಲೆ ನಾನು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೊದಲು ಪ್ರಕರಣ ದಾಖಲು ಮಾಡಿ ನಂತರ ಸ್ಥಳ ಮಹಜರ್ ಮಾಡಿರುತ್ತೇವೆ.

ಅಮಾನತ್ತು ಮಹಜರ್ ಮಾಡುವ ಕಾಲಕ್ಕೆ ಮುದ್ದೆ ಮಾಲುಗಳನ್ನು ಹಾಜರುಪಡಿಸಿದ ವ್ಯಕ್ತಿಯ ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ಅವರ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಮಹಜರನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಮೋಟರ್ ಸೈಕಲ್ಲನ್ನು ಜಪ್ತಿ ಮಾಡಿಕೊಂಡಿದ್ದು ವಿನಾಃ ಕಾರಣ ನಮ್ಮ ಠಾಣೆಯ ಅಂಕಿ ಅಂಶ ತೋರಿಸಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆ ಪಡೆಯದಿದ್ದರೂ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**